# ಪಾಠ-10: ಶಿಷ್ಯತ್ವ

(1 ಕೊರಿಂಥ 12, ವಿ.ಕಾ. 18, ಮತ್ತಾಯ 20, ಮಾರ್ಕ 8)
ಮೂಲ: ಬ್ರೂಸ್ ಎನ್. ಕ್ಯಾಮರಾನ್, ಅನುವಾದ: ಪಾಸ್ಟರ್ ಚೆಲುವರಾಜು.

**ಪೀಠಿಕೆ:** ಅಮೇರಿಕಾದ "ಬುನಾದಿ ತಂದೆ"ಗಳಲ್ಲಿ ಒಬ್ಬರಾದ ಥಾಮಸ್ ಪೈನ್‌ರವರು, "ಮುನ್ನಡಿಸು, ಹಿಂಬಾಲಿಸು, ಇಲ್ಲವೇ ದಾರಿಯಿಂದ ತೊಲಗಿ ಹೋಗು" ಎಂದು ದುಡಿದಿದ್ದಾರೆ. ಈ ಮೇಲಿನ ಮೂರರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಲು ಹೇಳಿದರೆ, ಅದೇಷ್ಟು ಜನ "ಹಿಂಬಾಲಿಸು" ಎಂಬುದನ್ನು ಆರಿಸಿಕೊಳ್ಳುತ್ತಾರೆ. ಬಹಳ ಜನ ಅದನ್ನು ಆರಿಸಿಕೊಳ್ಳುವುದಿಲ್ಲ ಎಂದು ನನಗನ್ನಿಸುತ್ತದೆ. ಬಹಳ ಜನರಿಗೆ ಮುನ್ನಡೆಸುವುದು ಇಷ್ಟ, ಇನ್ನೂ ಬಹಳ ಜನಕ್ಕೆ ಅವರ ಇಷ್ಟದಂತೆ ನಡೆದುಕೊಳ್ಳುವುದೇ ಇಷ್ಟ. ನಮ್ಮ ಇಂದಿನ ಪಾಠ, ಹಿಂಬಾಲಿಸುವುದನ್ನು ಕುರಿತದ್ದಾಗಿದೆ. ದೇವರಿಗೆ ಶಿಷ್ಯರಾಗಿರುವುದೆಂದರೇನು? ಸಾಂಪ್ರದಾಯತನವನ್ನು ಅನುಸರಿಸುವುದೇ? ಅಥವಾ ಹಿಂಬಾಲಿಕನಾಗಿದ್ದು, ಮುಂದಾಳುತನ ವಹಿಸಿಕೊಳ್ಳುವುದೇ? ಸತ್ಯವೇದದ ಆಳವಾದ ಅಧ್ಯಯನದಿಂದ ಈ ವಿಷಯವನ್ನು ಕುರಿತು ಗಂಭೀರ ಚಿಂತನೆ ನಡೆಸೋಣವೇ?

## I. ಕ್ರಿಸ್ತನ ದೇಹದ ಅಂಗಗಳು:

ಅ) 1 ಕೊರಿಂಥ 12:27 ನ್ನು ಓದಿಕೊಳ್ಳಿರಿ. ಕ್ರಿಸ್ತನ ದೇಹದ ಒಂದು ಭಾಗವಾಗಿರುವುದಕ್ಕೂ ಮತ್ತು ಶಿಷ್ಯತ್ವಕ್ಕೂ ಇರುವ ಸಂಬಂಧವೇನು? (ಯೇಸುಸ್ವಾಮಿಯನ್ನು ನಾವು ಹಿಂಬಾಲಿಸಿದಾಗ, ಆತನ ಸೇವೆಯಲ್ಲಿ ನಮಗೆ ಪಾತ್ರವಿದೆ. ಇಲ್ಲಿನ ಆಸಕ್ತಿಕರ ವಿಷಯವೇನೆಂದರೆ, ನಮ್ಮ ಶಿಷ್ಯತ್ವದ ಕೆಲಸವನ್ನು "ದೇಹ"ಕ್ಕೆ ಹೋಲಿಸಲಾಗಿದೆ.

ಆ) 1 ಕೊರಿಂಥ 12:28 ನ್ನು ಓದಿಕೊಳ್ಳಿರಿ. ಈ ಪಟ್ಟಿಯಲ್ಲಿ ಯಾವ ಯಾವ ಪಾತ್ರಗಳು, ನಾಯಕತ್ವದ ಪಾತ್ರಗಳಾಗಿವೆ? (ಅಪೋಸ್ತಲರು ಮತ್ತು ಪ್ರವಾದಿಗಳು ನಾಯಕರಂತೆ ಕಾಣುತ್ತಾರೆ).

1) ಈ ಗುಂಪಿನಲ್ಲಿ ಹಿಂಬಾಲಕರಂತೆ ಕಾಣುವವರ್ಯಾರು?
(ಈ ಪ್ರಶ್ನೆಗೆ ಉತ್ತರಿಸುವುದು ಅಷ್ಟು ಸುಲಭವಲ್ಲ, ಅಲ್ಲವೇ? ಬಹುಶ: "ಸಹಾಯಕರು"ಗಳನ್ನು ಹಿಂಬಾಲಕರು ಎಂದೆನಿಸಬಹುದೇನೋ?

2) ನಾಯಕ ಮತ್ತು ಹಿಂಬಾಲಕನನ್ನು ಕುರಿತ ಪ್ರಶ್ನೆಯನ್ನು ಉತ್ತರಿಸುವುದು ಕಷ್ಟ ಎಂದೇಣಿಸುವುದೇಕೆ? ಆದರೆ ಇದು ಅನಿವಾರ್ಯ ಎಂದು ಹೇಳುವುದಕ್ಕೆ ದೇವರಿಗೂ ಅಸಾಧ್ಯವೇ?

3) ಸತ್ಯವೇದವು ಸಭೆಯನ್ನು ಒಂದು ಸೈನ್ಯ ಅಥವಾ ಒಂದು ರಾಷ್ಟ್ರಕ್ಕೆ ಹೋಲಿಸುವುದಕ್ಕೆ ಬದಲಾಗಿ, ಒಂದು ದೇಹಕ್ಕೆ ಹೋಲಿಸಿರುವುದು ಏಕೆ? (ಏಕೆಂದರೆ ಹಿಂಬಾಲಕನಿಗೂ ಮತ್ತು ನಾಯಕನಿಗೂ ನಡುವೆ ಎಳೆಯಬೇಕಾದ ಗೆರೆ ಅಸ್ಪಷ್ಟ. ಒಂದು ಸೈನ್ಯ ಅಥವಾ ಒಂದು ರಾಷ್ಟ್ರದಲ್ಲಿ, ಕೆಲವರು ನಾಯಕರುಗಳಾಗಿರುತ್ತಾರೆ. ಉಳಿದವರು ಹಿಂಬಾಲಕರಾಗಿರುತ್ತಾರೆ. ದೇವರೇ ನಮಗೆ ನಾಯಕನಾಗಿರುವುದರಿಂದ, ಸಭೆ ಈ ವಿಷಯವನ್ನು ಭಿನ್ನವಾದ ರೀತಿಯಲ್ಲಿ ಕಾಣುತ್ತದೆ. ಆದ್ದರಿಂದಲೇ ದೇವರು ತಮ್ಮ ಸಭೆಯನ್ನು ವಿಶಾದಿಸುವಾಗ ಅದನ್ನು ಒಂದು ಸೈನ್ಯಕ್ಕೆ ಹೋಲಿಸದೇ, ಒಂದು ದೇಹದ ಉದಾಹರಣೆಗೆ ಹೋಲಿಸಿದರೆಂದು ನನಗನ್ನಿಸುತ್ತದೆ).

4) 1 ಕೋರಿಂಥ 12:20-21 ನ್ನು ಓದಿಕೊಳ್ಳಿರಿ. ನಾಯಕರು ಮತ್ತು ಹಿಂಬಾಲಕರ ವಿಷಯ ಬಂದಾಗ, ಸಭೆ ಹೇಗೆ ನಡೆದುಕೊಳ್ಳುತ್ತದೆ? (ನಾಯಕ/ಹಿಂಬಾಲಕರ ಸ್ಥಾನಮಾನ ಕ್ರಮಬದ್ಧತೆಯನ್ನು ಸ್ಪಷ್ಟಪಡಿಸುವುದಕ್ಕೆ ಬದಲಾಗಿ, ಸಭೆಯ ಪ್ರತಿಯೊಂದು ಅಂಗವು ಪ್ರಾಮುಖ್ಯ, ಆದ್ದರಿಂದ ಅವುಗಳ ನಡುವಿನ ಹೊಂದಾಣಿಕೆ ಸಾಮರಸ್ಯದಿಂದ ಕೂಡಿರಬೇಕೆಂದು ಹೇಳಿದೆ. ಸಭೆಯಲ್ಲಿ ಪ್ರತಿಯೊಬ್ಬರೂ ಬಹಳ ಮುಖ್ಯ ಎಂದೆಣಿಸುತ್ತಾರೆ. ಪ್ರತಿಯೊಬ್ಬರಿಗೂ ಸಮಾನ ಸ್ಥಾನಮಾನವುಂಟು. ಥಾಮಸ್ ಪೈನೆ ತನ್ನ ಹೇಳಿಕೆಯನ್ನು ನೀಡುವಾಗ, ಸಭೆಯನ್ನು ಮನಸ್ಸಿನಲ್ಲಿಟ್ಟುಕೊಂಡಿರಲಿಲ್ಲ).

## II. ಕಲಿಯುವತ್ತ ಒಲವು ತೋರುವ ನಾಯಕರು:

ಅ) ವಿ.ಕಾ. 18:13 ನ್ನು ಓದಿಕೊಳ್ಳಿರಿ. ಈ ಸಂದರ್ಭದಲ್ಲಿ ಜನ, ಈ ವ್ಯವಸ್ಥೆಯಲ್ಲಿ, ಸಂತೋಷರಾಗಿದ್ದರೆ? (ಜನರು ಮೋಶೆಯ ಬಳಿಗೆ ಬರುತ್ತಿದ್ದರು. ಹಾಗೆ ಬಂದವರು, ''ಪ್ರಾತ:ಕಾಲದಿಂದ ಸಾಯಂಕಾಲದವರೆಗೂ'' ಮೋಶೆಯ ಬಳಿ ನಿಲ್ಲುತ್ತಿದ್ದರು ಎಂಬ ಹೇಳಿಕೆಯೇ? ಇಡೀ ವ್ಯವಸ್ಥೆ ಬಹಳ ನಿಧಾನವಾಗಿ ಕೆಲಸಮಾಡುತ್ತಿದ್ದಕ್ಕೆ ಸಾಕ್ಷಿಯಗಿದೆ).

1) ಈ ವ್ಯವಸ್ಥೆ ಮೋಶೆಗೆ ಸಂತೋಷ ಕೊಟ್ಟಿತ್ತೇ? (ದೇವರ ಪರವಾಗಿ ಮಾತನಾಡುವುದಕ್ಕಿಂತ ಉತ್ತಮವಾದ ಕೆಲಸ ಮತ್ತೊಂದುಂಟೇ? ಆದರೆ ಮೋಶೆ ಬಹಳ ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದನು).

ಆ) ವಿ.ಕಾ. 18:17 ನ್ನು ಓದಿಕೊಳ್ಳಿ. ಮೋಶೆ ಯಾರಾದರೂ ಈ ರೀತಿಯಾಗಿ ನನ್ನೊಂದಿಗೆ ಮಾತನಾಡುತ್ತಾರೆ ಎಂದು ನಿರೀಕ್ಷಿಸಿದ್ದನೇ? ದೇವರ ಪರವಾಗಿ ಗಂಟೆಗಟ್ಟಲೇ ಮಾತನಾಡುವುದು ಮತ್ತು ತನ್ನ ಜನಾಂಗಕ್ಕೆ ಸಹಾಯಕನಾಗಿರುವುದು ಒಳ್ಳೆಯ ಕೆಲಸವಲ್ಲವೇ?

ಇ) ವಿ.ಕಾ. 18:18–23 ನ್ನು ಓದಿಕೊಳ್ಳಿರಿ. ಒಂದು ಸಮಯ ನೀವೇ ಮೋಶೆಯಾಗಿದ್ದ ಪಕ್ಷದಲ್ಲಿ, ಇತ್ರೋ. (ನಿಮ್ಮ ಮಾವ)ನ ಮಾತುಗಳಿಗೆ ಯಾವ ರೀತಿಯಾಗಿ ಪ್ರತಿಕ್ರಿಯಿಸುತ್ತಿದ್ದೀರಿ? ಇಷ್ಟಕ್ಕೂ ದೇವರು ಮಾತನಾಡುತ್ತಿದ್ದದ್ದು ನಿಮ್ಮೊಂದಿಗೆ ವಿನಹ ನಿಮ್ಮ ಮಾವನ್ನೊಂದಿಗೆ ಅಲ್ಲ. ಹೀಗಿರುವಾಗ ನೀವು ನಿಮ್ಮ ಮಾವನ ಮಾತುಗಳ ಪ್ರಕಾರ ನಡೆದುಕೊಳ್ಳುತ್ತಿದ್ದೀರಾ?

1) ವಿ.ಕಾ. 18:19 ನ್ನು ಗಮನಿಸಿರಿ. ಇತ್ರೋ, ಇಲ್ಲಿ ಮೋಶೆಯ ಕೆಲಸ ಏನು ಎಂಬುದನ್ನು ಸ್ಪಷ್ಟಪಡಿಸುತ್ತಿದ್ದಾನೆಯೇ? (ಹೌದು, ಜನರ ಸಮಸ್ಯೆಗಳನ್ನು ಮೋಶೆ ದೇವರ ಬಳಿಗೆ ಕೊಂಡೊಯ್ಯಬೇಕೆ ವಿನಹ, ತಾನೇ ತೀರ್ಮಾನ ತೆಗೆದುಕೊಳ್ಳಬಾರದು. ಇದೊಂದು ಸೂಕ್ತ ಸಲಹೆ. ಮೋಶೆ ಮಾಡುತ್ತಿದ್ದ ಕೆಲಸಗಳಲ್ಲಿ, ಕೆಲವು ಸಣ್ಣ ಪುಟ್ಟ ಕೆಲಸಗಳನ್ನು ಬೇರೆಯವರು ಮೋಶೆಯ ರೀತಿಯಲ್ಲಿಯೇ ಮಾಡಬಹುದಾಗಿತ್ತು ಎಂಬುದನ್ನು ಆತ ಮನಗಾಣದೇ ಹೋದದ್ದರಿಂದ, ಆತ ತನಗೆ ತಾನೇ ತುಂಬಾ ಮುಖ್ಯತ್ವ ಕೊಟ್ಟುಕೊಂಡಿರಬಹುದು ಎಂದೆಣಿಸುತ್ತದೆ.

2) ವಿ.ಕಾ. 18:23 ನ್ನು ಗಮನಿಸಿರಿ. ಇತ್ರೋ ಇಲ್ಲಿ ಏನು ಹೇಳುತ್ತಿದ್ದಾನೆ? (ತಾನು ಏನು ಆಲೋಚನೆ ಕೊಟ್ಟನೋ, ಅದು ದೇವರಿಂದ ಅಪ್ಪಣೆಯಾಗಲಿ ಎಂದಿದ್ದಾನೆ).

3) ಈ ಕಥೆಯಲ್ಲಿ ನಾವು ಶಿಷ್ಯತ್ವವನ್ನು ಕುರಿತು ಕಲಿಯುವುದೇನು? (ನಾಯಕತ್ವಕ್ಕೆ ಸಂಬಂಧಿಸಿದಂತೆ ನಾವು "ದೇಹದ" ತತ್ವವನ್ನು ಮೇಲೆ ಕಲಿತುಕೊಂಡೆವಲ್ಲವೇ? ಈ ವ್ಯವಸ್ಥೆ ಸಹ ಅದಕ್ಕೆ ಒಂದು ಉತ್ತಮ ನಿದರ್ಶನವಾಗಿದೆ. ಮುಖ್ಯವಾದ ಕೆಲಸವೊಂದನ್ನು ಮಾಡುವಾಗ, ಮೋಶೆ

ತನ್ನೊಬ್ಬನನ್ನೇ ಆತುಕೊಳ್ಳದೇ, ಇತರರ ಸಹಾಯ ಪಡೆಯುವುದು ಒಳಿತು. ಮುಖ್ಯವಾದ ಕೆಲಸಗಳು ಸಾಮರ್ಥ್ಯಶಾಲಿ ಜನರ ನಡುವೆ ಹಂಚಿಕೊಳ್ಳುವುದು ಒಳ್ಳೆಯದು.

ಈ) ವಿ.ಕಾ. 18:24-26 ನ್ನು ಓದಿಕೊಳ್ಳಿರಿ. ಮೋಶೆ ಒಬ್ಬ ಒಳ್ಳೆ ನಾಯಕನು ಎನ್ನುವುದಾದರೆ, ನಾವು ಆತನಿಂದ ಕಲಿಯುವ ಪಾಠವೇನು? (ಮೋಶೆ, ತನಗೆ ಹೆಚ್ಚು ಪ್ರಾಮುಖ್ಯ ಕೊಟ್ಟು ಕೊಂಡವನು ಎನಿಸಿದರೂ, ಆತ ಬೇರೆಯವರ ಸಲಹೆಯನ್ನು ಗೌರವಿಸುತ್ತಾನೆ ಎಂಬುದು ಸ್ಪಷ್ಟವಾಯತು).

1) ಒಂದು ಸಂಸ್ಥೆಯನ್ನು ಕುರಿತು ಇದು ನಮಗೆ ಬೋಧಿಸುವುದೇನು? (ಒಂದು ‘‘ದೈಹಿಕ ರಚನೆಯನ್ನು’’ ಕ್ರಮಬದ್ಧವಾಗಿಟ್ಟುಕೊಳ್ಳಬೇಕಾದರೆ ಅದಕ್ಕೆ ಒಂದು ವ್ಯವಸ್ಥೆಯ ಅವಶ್ಯಕತೆಯಿದೆ. ದೇವರನ್ನು ವ್ಯವಸ್ಥೆಯ ತಲೆಯನ್ನಾಗಿಟ್ಟುಕೊಂಡು, ಸಮರ್ಥಶಾಲಿ ಜನರನ್ನು ಆರಿಸಿಕೊಂಡು, ಕೆಲಸಗಳನ್ನು ಅವರಿಗೆ ಹಂಚಿಕೊಡುವುದು ಕಾರ್ಯಕ್ರಮದ ಕೀಲಿಕೈ ಎನಿಸುತ್ತದೆ).

## III. ಸೇವಾಮನೋಭಾವದ ನಾಯಕರುಗಳು:

ಅ) ಮತ್ತಾಯ 20:20-21 ನ್ನು ಓದಿಕೊಳ್ಳಿರಿ. ಈ ಎರಡು ವಚನಗಳನ್ನು ಮಾತ್ರ ಓದಿಕೊಂಡಾಗ, ಉತ್ತರ ಏನಾಗಿರಬಹುದೆಂದು ನೀವು ಊಹೆ ಮಾಡುತ್ತೀರಿ? (ತಮ್ಮ ಬಹುಮುಖ್ಯವಾದ ಕೆಲಸವನ್ನು ಕೈಗೊಳ್ಳಲು ಎಂಥಹ ಭವಿಷ್ಯ ನಾಯಕರುಗಳು, ತಮ್ಮ ‘‘ತಾಯಿ’’ಯನ್ನು ಮುಂದೆ ನೂಕುತ್ತಾರೆ).

ಆ) ಮತ್ತಾಯ 20:22ನ್ನು ಓದಿಕೊಳ್ಳಿರಿ.

‘‘ಆಗುವದು’’ ಎಂಬ ಉತ್ತರದಿಂದ ನಾವು ಕಲಿಯುವುದೇನು? (ಮಗಂದಿರು ತಮ್ಮ ‘‘ತಾಯಿ’’ಯನ್ನು ಕಲಿಹಿಸುವುದು ಮಾತ್ರವಲ್ಲ ಅಲ್ಲೆ ನಿಂತು ಸಂಭಾಷಣೆಯನ್ನು ಆಲಿಸುವವರಾಗಿದ್ದಾರೆ!).

1) ಮಗಂದಿರುವ ಕೊಟ್ಟ ಉತ್ತರದ ಬಗ್ಗೆ ನಿವೇನು ಆಲೋಚನೆ ಮಾಡುತ್ತೀರಿ? (ಅವರು ಏನು ಕೇಳುತ್ತಿದ್ದಾರೆ ಎಂದು ಅವರಿಗೆ ಗೊತ್ತಿಲ್ಲ ಎಂದು ಯೇಸುಸ್ವಾಮಿ ಹೇಳುತ್ತಾರೆ. (ಹೀಗಿದ್ದರೂ ಇನ್ನೂ ಅಜ್ಞಾನ ತೋರಿಸುತ್ತಾ) ನಮ್ಮಿಂದ

“ಆಗುವುದು” ಎಂಬ ಉತ್ತರ ಕೊಡುತ್ತಾರೆ ಶಿಷ್ಯರು. ಪರಿಪೂರ್ಣ ನಾಯಕರೂ ಸಹ ಬಲಹೀನರೂ ಮತ್ತು ಹೇಳಿದ್ದನ್ನು ಕೇಳಿಸಿಕೊಳ್ಳದ ಕಿವುಡರೂ ಆಗಿದ್ದಾರೆ).

ಇ) ಮತ್ತಾಯ 20:23 ನ್ನು ಓದಿಕೊಳ್ಳಿರಿ. ಸಭಾ ನಾಯಕತ್ವವನ್ನು ತೀರ್ಮಾನಿಸುವವರ್ಯಾರು? (ದೇವರು. ಯೇಸುಸ್ವಾಮಿ ಇಲ್ಲಿ ತುಂಬಾ ನಯವಾಗಿ ಉತ್ತರ ನೀಡಿದ್ದಾರೆ. ತೀರ್ಮಾನ ತಂದೆಯಾದ ದೇವರಿಗೆ ಸೇರಿದ್ದು ಎಂದಿದ್ದಾರೆ).

ಈ) ಮತ್ತಾಯ 20:24 ನ್ನು ಓದಿಕೊಳ್ಳಿರಿ. ಉಳಿದ ಹತ್ತು ಮಂದಿ ಶಿಷ್ಯರು ಈ ವಿಷಯದಲ್ಲಿ ಅಸಂತೋಷಪಟ್ಟಿದ್ದೇಕೆ? ಏಕೆಂದರೆ ಇವರ ತಾಯಂದಿರು ಈ ಸ್ಥಾನಮಾನಕ್ಕಾಗಿ ಬಲವಾಗಿ ಹೋರಾಡಿರಲಿಲ್ಲ? ಬಹುಶ: ತಾವು ಈ ಕೋರಿಕೆಯನ್ನು ಮೊದಲೇ ಏಕೆ ಯೇಸುಸ್ವಾಮಿಯ ಮುಂದೆ ಇಡಲಿಲ್ಲವೆಂದು ಅಸಂತೋಷಪಟ್ಟಿರಬಹುದು. ಅವರಿಗೆ ಹಿಂಬಾಲಿಸುವುದು ಬೇಕಾಗಿರಲಿಲ್ಲ. ಆದರೆ ಮುಂದಾಳತ್ವ ಬೇಕಾಗಿತ್ತು.

ಉ) ಮತ್ತಾಯ 20:25-28 ನ್ನು ಓದಿಕೊಳ್ಳಿ. ಎಂಥಹ ಶಿಷ್ಯತ್ವ / ನಾಯಕತ್ವವನ್ನು ಯೇಸುಸ್ವಾಮಿ ಎದುರುನೋಡುತ್ತಿದ್ದಾರೆ. (ಸೇವಾಮನೋಭಾವದ ನಾಯಕತ್ವ. ಇದೊಂದು ವಿಚಿತ್ರವಾದ ಕಲ್ಪನೆ: ಒಬ್ಬ ನಾಯಕ ತನ್ನ ಅಧಿಕಾರವನ್ನು ಬಳಸಿಕೊಂಡು ಮತ್ತೊಬ್ಬನಿಗೆ ಸಹಾಯಮಾಡುತ್ತಾನೆಯೇ ವಿನಹ, ತನಗೇ ಸಹಾಯಮಾಡಿಕೊಳ್ಳುವುದಿಲ್ಲ).

1) ಆಧುನಿಕ ಪ್ರಪಂಚದ ಇತಿಹಾಸದಲ್ಲಿ ಯೇಸುಸ್ವಾಮಿಯವರ ಈ ಮಾತುಗಳು ಸಂದರ್ಭೋಚಿತವಾಗಿವೆ. ಪ್ಲೇಟೋ ಮತ್ತು ಅರಿಸ್ಟಾಟಲ್‌ರಂತಹ, ಹಿಂದಿನ ಕಾಲದ ರಾಜಕೀಯ ಚಿಂತನೆಯಲ್ಲಿ ಮುಂಚೂಣಿಯಲ್ಲಿದ್ದವರೂ ಕೂಡ ಕೆಲವು ಪ್ರಾಮುಖ್ಯರಾದ ಜನರು ಮಾತ್ರ ನಾಯಕರಾಗಿದ್ದು, ಉಳಿದವರು ಅವರ ಸೇವೆ ಮಾಡಬೇಕೆನ್ನುವ ಅಭಿಪ್ರಾಯ ಹೊಂದಿದ್ದರು. ನಾಯಕರಾದವರು ಜನಸಮೂಹದ ಸೇವಕರಾಗಿರಬೇಕೆಂದು ಯೇಸುಸ್ವಾಮಿ ಹೇಳಿದ್ದಾರೆ. (ನಿಮ್ಮಲ್ಲಿ ದೊಡ್ಡವನಾಗಿರಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು” ಇಂಥಹ ಬೋಧನೆಯ ಅಡಿಪಾಯದಲ್ಲಿ, ಅಮೇರಿಕಾದ ಪ್ರಜಾಪ್ರಭುತ್ವದಲ್ಲಿ “ಸಾರ್ವಜನಿಕ ಸೇವಕ” ಎಂಬ ಹೆಸರು ನಾಯಕರಿಗುಂಟು).

2) ನಮ್ಮ ಪಾಠ ಪ್ರಾಪಂಚಿಕ ಸರಕಾರಿಗಳ ವಿವಿಧ ರೂಪಗಳನ್ನು ಕುರಿತದ್ದಲ್ಲ. ಆದರೆ, ಇಂದು ಸಭಾ ನಾಯಕರುಗಳಾಗಿ ನಾವು ಕಲಿತುಕೊಳ್ಳಬೇಕಾದ ಪಾಠಗಳೇನು?

1) ನೀವು ಇಲ್ಲಿ ಕಲಿಯುವ ಪಾಠವೇನು?

## IV. ಶಿಷ್ಯತ್ವ:

ಅ) ಮತ್ತಾಯ 8:34-38 ನ್ನು ಓದಿಕೊಳ್ಳಿ. ನಮ್ಮ ಶಿಲುಬೆಯನ್ನು ಹೊತ್ತುಕೊಂಡು, ಯೇಸುಸ್ವಾಮಿಯವರನ್ನು ಹಿಂಬಾಲಿಸುವುದು ಎಂದರೆ ಏನು?

1) ಮತ್ತಾಯ 11:28-30 ನ್ನು ಓದಿಕೊಳ್ಳಿರಿ. ಯೇಸುಸ್ವಾಮಿಯವರ ‘‘ನೊಗ’’ ಎಂದರೆ ಅದು ಅವರ ‘‘ಶಿಲುಬೆ’’ಯೇ ಆಗಿದೆ. ಆದರೆ ಅದು ಅಷ್ಟೊಂದು ಸಂಕಷ್ಟದ್ದೂ ಮತ್ತು ಭಯಂಕರದ್ದು. ಆಗಿರುವಾಗ, ಅದನ್ನು ಯೇಸುಸ್ವಾಮಿ ‘‘ನನ್ನ ನೊಗವು ಮೃದುವಾದದ್ದು’’ ಎಂದು ಹೇಳಿರುವದು ಹೇಗೆ? (ನೀವು ನಿಮ್ಮ ಆಸಕ್ತಿಗಳಿಗೆ ಮಾತ್ರ ದುಡಿಯುತ್ತಿದ್ದರೆ, ಅದು ಖಂಡಿತ ಬೇಸರ ತರುತ್ತದೆ. ಪರೋಪಕಾರ ಇನ್ನೂ ಹೆಚ್ಚು ಆಸಕ್ತಿಕರ ಮತ್ತು ಆಶೀರ್ವಾದ ನಮ್ಮ ಜೀವನವನ್ನು ಇದಕ್ಕಾಗಿ ಮುಡಿಪಾಗಿಡುವುದೆಂದರೆ, ಅದು ಬಹಳ ಅಪಾಯಕಾರಿ ಎನಿಸುತ್ತದೆ ನಿಜ, ಆದರೆ ಅದಕ್ಕೆ ಈಡಾಗಿ ದೇವರು ನಮಗೆ ನಿತ್ಯ ಜೀವನವನ್ನು ಕೋಡುತ್ತಾರೆ. (ಒಳ್ಳೇ ಪದವಿ!) ಆದರೂ ಪರೋಪಕಾರಿಗೆ ಅವರ ನೊಗ ‘‘ಮೃದು’’ವಾಗಿರುವಂತೆ ನೋಡಿ ಕೊಳ್ಳುತ್ತಾರೆ).

ಆ) ಮತ್ತಾಯ 7:21 ನ್ನು ಓದಿಕೊಳ್ಳಿರಿ. ‘‘ದೊಡ್ಡ ಟೋಪಿ, ಪಶುವಿಲ್ಲ’’ ಎಂಬ ಗಾದೆ ಆಂಗ್ಲದಲ್ಲುಂಟು. ಇದರ ಅರ್ಥವಾದರೂ ಏನು? (ಮಕ್ಕಳು ಬಸವನ ಮದುವೆ ಆಟ ಆಡುತ್ತಾರೆ. ಆದರೆ ಅಲ್ಲಿ ಬಸವನೋ ಇರುವುದಿಲ್ಲ).

1) ಯೇಸುಸ್ವಾಮಿ ಈ ಅರ್ಥದಲ್ಲಿ ಇಲ್ಲಿ ಮಾತಾಡಿದರೇ? (ಈ ಜನ ಬರೀ ಬಾಯಿ ಮಾತಿನವರು, ಆದರೆ ಕ್ರಿಯೆಯಲ್ಲಿ ಏನೂ ಇಲ್ಲ, ಎನ್ನುವ ಭಾವದಲ್ಲಿ ಯೇಸುಸ್ವಾಮಿ ಇಲ್ಲಿ ಮಾತನಾಡಿದಂತಿದೆ).

ಇ) ಮತ್ತಾಯ 7:22-23 ನ್ನು ಓದಿಕೊಳ್ಳಿರಿ. ಒಂದು ನಿಮಿಷ ತಡೆಯಿರಿ. ಈ ಮಂದಿ ಬಹಳ ದುಡಿದಿದ್ದಾರೆ. ಇಷ್ಟರ ಮಟ್ಟಿಗೆ ದುಡಿದ ನಂತರವೂ ಯೇಸುಸ್ವಾಮಿ ಅವರ ಕೃತ್ಯಗಳನ್ನು ಗಣನೆಗೆ ತಾರದೇ ಅವುಗಳನ್ನು ನಿರಾಕರಿಸುವುದು ಏಕೆ? ಯೇಸುಸ್ವಾಮಿಗೆ ದುಡಿಯುತ್ತಿರುವವರನ್ನು ಕಂಡು, ಯೇಸುಸ್ವಾಮಿ ನಿಮ್ಮನ್ನು ನಿರಾಕರಿಸುತ್ತಾರೆ ಎಂದು ಹೇಳುವದು ಹೇಗೆ? ಇಲ್ಲಿ ಗಮನಿಸಬೇಕಾದ ತುಂಬಾ ಮುಖ್ಯವಾದ ಅಂಶವೆಂದರೆ, ಯೇಸುಸ್ವಾಮಿ, ‘‘ನಾನೆಂದೂ ನಿಮ್ಮ ಗುರುತು

ಕಾಣೆನು” ಎಂದು ಅವರಿಗೆ ಹೇಳಿದ್ದಾರೆ. ಯೇಸುಸ್ವಾಮಿಯನ್ನು ನಾವು ಅರಿತಿರಬೇಕೆಂದು ಆಶೆಪಡುವವರು, ತಂದೆಯಾದ ದೇವರ ಚಿತ್ತವಾಗಿದೆ. ಇದು ತಾನೇ ಶಿಷ್ಯನ ಪ್ರಥಮ ಕರ್ತವ್ಯ. ನಮಗೆ ಯೇಸುಸ್ವಾಮಿ ಗೊತ್ತಿಲ್ಲದಿದ್ದರೆ, ನಮ್ಮ ಕೆಲಸಗಳೆಲ್ಲಾ ದಾರಿ ತಪ್ಪುತ್ತವೆ).

ಈ) ಸ್ನೇಹಿತನೇ, ಈ ಬರಹ ಶಿಷ್ಯತ್ವಕೆ ಪರಿಪೂರ್ಣ ವರ್ಣಚಿತ್ರವಾಗಿದೆಯೇ? ನಿಜವಾದ ಶಿಷ್ಯನಿಗೆ, ದೇವರು ಯಾರು ಎಂದು ಗೊತ್ತು ಮತ್ತು ಸಭೆಯಲ್ಲಿ ಯಾವ ಕೆಲಸಕ್ಕೆ ತಾನು ಹೊಂದಿಕೊಳ್ಳುತ್ತೇನೆ ಎಂದೂ ಗೊತ್ತು. ನಿಜವಾದ ಶಿಷ್ಯನಿಗೆ ಸಹಾಯಮಾಡುವ ಗುರಿ ಇರುತ್ತದೆಯೇ ವಿನಹ ತನ್ನನ್ನೇ ಹೆಚ್ಚಿಸಿಕೊಳ್ಳುವ ಗುರಿಯಿರುವುದಿಲ್ಲ. ನಿಮ್ಮ ಮನೋವೃತ್ತಿ ಬದಲಾಗದಿದ್ದರೆ, ಪವಿತ್ರಾತ್ಮ ದೇವರಲ್ಲಿ ಅಂಥಹ ಬದಲಾವಣೆಗಾಗಿ ಬೇಡಿಕೊಳ್ಳುವಿರಾ? ಒಂದಲ್ಲ ಒಂದು ರೀತಿಯಲ್ಲಿ ನೀವು ಸಭಾಸೇವೆ ಮಾಡದಿದ್ದರೆ, ಸಭೆಗೆ ಯಾವ ರೀತಿಯಲ್ಲಿ ಸಹಾಯಕನಾಗಿರಬಲ್ಲೇ ಎಂದು ದೇವರಲ್ಲಿ ಮನವಿ ಮಾಡಿಕೊಳ್ಳಿರಿ.

## V. ಮುಂದಿನ ವಾರ: ಪಾರುಪತ್ಯೆಗಾರಿಕೆ.